Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
(ವಿಶೇಷ ಸಂಚಿಕೆ)

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ.


| | | |
|---|---|---|
| सं–1 नई दिल्ली सोमवार, जनवरी 20, 1992 | पुष्य 30, 1913 (शक) | खन्ड–13 |
| ಸಂಚಿಕೆ ೧ ನವದೆಹಲಿ ಸೋಮವಾರ, ಜನವರಿ ೨೦, ೧೯೯೨ | ಪುಷ್ಯ ೩೦, ೧೯೧೩ (ಶಕ) | ಸಂಪುಟ ೧೩ |
| No. 1 New Delhi Monday, January 20, 1992 | Pushya 30, 1913 (Saka) | Vol. 13 |


## Ministry of Law, Justice & Company Affairs

(Legislative Department)

New Delhi, August 26, 1991.

The translations in Kannada of the following Acts, namely– (1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ [illegible] ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ [illegible], ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) [illegible] ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) [illegible] ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ [illegible] ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ [illegible] ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು [illegible].

Ministry of Law, Justice & Company Affairs
(Legislative Department)
New Delhi, November 26, 1991.

The Translations in Kannada of the following namely-(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ – (1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹನ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) ದುಬಾರಿ ಬಡ್ಡಿ ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) ಮಹಿಳಾ ಅಸಭ್ಯ ಚಿತ್ರಣ (ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯ ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ ಅಂಚೆ ಕಛೇರಿ ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರ ಪಡಿಸುವಿಕೆಯನ್ನು ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣೆ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (a) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs
(Legislative Department)
New Delhi, December 16, 1991.

The Traslations in Kannada of the following Acts namely (1) The Copy Right Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಕೃತಿಸ್ವಾಮ್ಯ ಅಧಿನಿಯಮ, 1957 (2) ಬಾಲ್ಯವಿವಾಹ ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) ಅಂತರ ರಾಜ್ಯ ಜಲವಿವಾದ ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ ಮತ್ತು [illegible] 1956 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ [illegible] ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ನಾಣ್ಯ ತಯಾರಿಕೆ ಅಧಿನಿಯಮ, 1906

(1906ರ 3)

[2ನೇ ಮಾರ್ಚ್ 1906]

**ನಾಣ್ಯ ತಯಾರಿಕೆ ಮತ್ತು ಟಂಕಸಾಲೆಗೆ ಸಂಬಂಧಪಟ್ಟ ಕಾನೂನನ್ನು ಕ್ರೋಢೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.**

ನಾಣ್ಯ ತಯಾರಿಕೆ ಮತ್ತು ಟಂಕಸಾಲೆಗೆ ಸಂಬಂಧಪಟ್ಟ ಕಾನೂನನ್ನು ಕ್ರೋಢೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ; ಅದನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:—

## ಪ್ರಾರಂಭಿಕ

1. (1) **ಚಿಕ್ಕ ಹೆಸರು ಮತ್ತು ವ್ಯಾಪ್ತಿ:—** ಈ ಅಧಿನಿಯಮವನ್ನು ನಾಣ್ಯ ತಯಾರಿಕೆ ಅಧಿನಿಯಮ, 1906 ಎಂದು ಕರೆಯತಕ್ಕದ್ದು; ಮತ್ತು

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

2. **ಪರಿಭಾಷೆಗಳು:—** ಈ ಅಧಿನಿಯಮದಲ್ಲಿ ವಿಷಯ ಅಥವಾ ಸಂದರ್ಭದಲ್ಲಿ ತದ್ವಿರುದ್ಧವಾದುದು ಏನಾದರೂ ಇದ್ದ ಹೊರತು,—

(ಕ) "ವಿರೂಪಗೊಳಿಸುವುದು" ಎಂಬುದು ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಅದರ ಸಜಾತೀಯ ಪದಾವಳಿಗಳೊಂದಿಗೆ ಯುಕ್ತ ಸಪೇಕ್ಷದ ಪರಿಣಾಮಗಳಿಂದ ಕೂಡಲೇ ವ್ಯತ್ಯಾಸ ಗುರುತಿಸಬಹುದಾದಂತೆ ನಾಣ್ಯದ ಅಂಚನ್ನು ಕತ್ತರಿಸುವುದು, ಉಜ್ಜಿ ಸಣ್ಣ ಮಾಡುವುದು, ಮುದ್ರೆ ಹಾಕುವುದು ಅಥವಾ ಅದರ ಮೇಲ್ಮೈ ಅಥವಾ ಆಕಾರದ ಅಂಥ ಇತರ ಬದಲಾವಣೆಯನ್ನು ಒಳಗೊಳ್ಳುತ್ತದೆ;

(ಖ) "ಟಂಕಸಾಲೆ" ಎಂಬುದು ಈಗ ಅಸ್ತಿತ್ವದಲ್ಲಿರುವ ಮತ್ತು ಇನ್ನು ಮುಂದೆ ಸ್ಥಾಪಿಸಬಹುದಾದಂಥ ಯಾವುದೇ ಟಂಕಸಾಲೆಯನ್ನು ಒಳಗೊಳ್ಳುತ್ತದೆ;

(ಗ) "ನಿಯಮಿಸಲಾದುದು" ಎಂಬುದು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮದ ಮೂಲಕ ನಿಯಮಿಸಲಾದುದನ್ನು ಒಳಗೊಳ್ಳುತ್ತದೆ;

(ಘ) "ಅಂತರ" ಎಂದರೆ, ಮಾನಕ ತೂಕ ಮತ್ತು ಶುದ್ಧತೆಯಿಂದ ವಿಭಿನ್ನವಾಗಿರುವಿಕೆ;

(ಙ) "ಮಾನಕ ತೂಕ" ಎಂದರೆ ಯಾವುದೇ ನಾಣ್ಯಕ್ಕಾಗಿ ನಿಯಮಿಸಿದ ತೂಕ.

3. **ಟಂಕಸಾಲೆಗಳನ್ನು ಸ್ಥಾಪಿಸಲು ಮತ್ತು ರದ್ದುಗೊಳಿಸಲು ಅಧಿಕಾರ:—** ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,—

(ಕ) ತತ್ಕಾಲದಲ್ಲಿ ಟಂಕಸಾಲೆಯು ಅಸ್ತಿತ್ವದಲ್ಲಿರದಂಥ ಯಾವುದೇ ಸ್ಥಳದಲ್ಲಿ ಟಂಕಸಾಲೆಯನ್ನು ಸ್ಥಾಪಿಸಬಹುದು; ಮತ್ತು

(ಖ) ಈಗ ಅಸ್ತಿತ್ವದಲ್ಲಿರುವ ಅಥವಾ ಇನ್ನು ಮುಂದೆ ಸ್ಥಾಪಿಸಬಹುದಾದ ಯಾವುದೇ ಟಂಕಸಾಲೆಯನ್ನು ರದ್ದುಗೊಳಿಸಬಹುದು.

4. **ಬೆಳ್ಳಿಯ ನಾಣ್ಯಗಳು:—** ಭಾರತ ನಾಣ್ಯ ತಯಾರಿಕೆ (ತಿದ್ದುಪಡಿ) ಅಧಿನಿಯಮ, 1947ರ (1947ರ 28) 2ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ.

5. **ಮಾನಕ ತೂಕ ಮತ್ತು ಶುದ್ಧತೆ:—** ಇದನ್ನು ಅದೇ ಅಧಿನಿಯಮದ 2ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ.

## ನಾಣ್ಯ ತಯಾರಿಕೆ

6. (1) **ನಾಣ್ಯಗಳ ವರ್ಗಗಳು, ಪರಿಮಾಣಗಳು, ವಿನ್ಯಾಸ ಮತ್ತು ಸಮ್ಮಿಶ್ರಣ:—** ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ನಿರ್ಧರಿಸಬಹುದಾದಂಥ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಲ್ಲದಂಥ ವರ್ಗಗಳ ಅಂಥ ಪರಿಮಾಣಗಳ ಮತ್ತು ವಿನ್ಯಾಸಗಳ ಮತ್ತು ಅಂಥ ಸಮ್ಮಿಶ್ರಣದ ಅಂಥ ಲೋಹ ಅಥವಾ ಮಿಶ್ರ ಲೋಹಗಳ ನಾಣ್ಯಗಳನ್ನು ಕೇಂದ್ರ ಸರ್ಕಾರದ ಅಧಿಕಾರದ ಮೇರೆಗೆ ಹೊರಡಿಸುವುದಕ್ಕಾಗಿ ಟಂಕಸಾಲೆಯಲ್ಲಿ ಟಂಕಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕೇಂದ್ರ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ಅವಶ್ಯ ಅಥವಾ ವಿಹಿತವೆಂದು ಅಭಿಪ್ರಾಯಪಟ್ಟರೆ, ಅದು ಆ ಉಪಪ್ರಕರಣದಲ್ಲಿ ಉಪಬಂಧಿಸಿದಂಥದೇ ರೀತಿಯಲ್ಲಿ ಭಾರತದ ಪರಿಮಿತಿಗಳಾಚೆಯ ಯಾವನೇ ವ್ಯಕ್ತಿಯು (ಯಾವುದೇ ವಿದೇಶದ ಸರ್ಕಾರವನ್ನೊಳಗೊಂಡು) ನಾಣ್ಯಗಳನ್ನು ಟಂಕಿಸುವುದನ್ನು ಮತ್ತು ಆ ಉಪಪ್ರಕರಣದ ಮೇರೆಗಿನ ಅದರ ಅಧಿಕಾರದ ಮೇರೆಗೆ ಹೊರಡಿಸುವುದಕ್ಕಾಗಿ ಅಂಥ ನಾಣ್ಯಗಳ ಆಮದನ್ನು ಅಧಿಕೃತಗೊಳಿಸಬಹುದು.

7 **ಮಾನಕ ತೂಕ ಮತ್ತು ಅಂತರ:**—6ನೇ ಪ್ರಕರಣದ ಉಪಬಂಧಗಳ ಮೇರೆಗೆ ಟಂಕಿಸಿದ ಯಾವುದೇ ಹೆಸರಿನ ನಾಣ್ಯಗಳ ಮಾನಕ ತೂಕ ಮತ್ತು ಅಂಥ ನಾಣ್ಯಗಳನ್ನು ತಯಾರಿಸುವಲ್ಲಿ ಅನುಮತಿಸಲಾದ ಅಂತರವು ಕೇಂದ್ರ ಸರ್ಕಾರವು ಈ ಬಗ್ಗೆ ನಿಯಮಿಸಬಹುದಾದಂಥದ್ದು ಆಗಿರತಕ್ಕದ್ದು.

10. [**ನಾಣ್ಯಗಳ ತಯಾರಿಕೆಯನ್ನು ನಿರ್ದೇಶಿಸುವ ಮತ್ತು ಅವುಗಳ ಪರಿಮಾಣಗಳು ಮತ್ತು ವಿನ್ಯಾಸಗಳನ್ನು ನಿಯಮಿಸುವ ಅಧಿಕಾರ**] ಭಾರತ ನಾಣ್ಯ ತಯಾರಿಕೆ (ತಿದ್ದುಪಡಿ) ಅಧಿನಿಯಮ, 1947 (1947ರ 28)ದ 4ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ.

### ಕಾನೂನು ಸಮ್ಮತ ಚಲಾವಣೆ ಹಣ

11. [ಒಂದು ಸವರನ್ ಮತ್ತು ಅರ್ಧ ಸವರನ್‌ಗಳ ಅಪಮೌಲ್ಯೀಕರಣ]-ಅದೇ ಅಧಿನಿಯಮದ 4ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ.

12. [ಬೆಳ್ಳಿ ನಾಣ್ಯವು ಯಾವಾಗ ಕಾನೂನು ಸಮ್ಮತ ಚಲಾವಣೆ ಹಣ] -ಅದೇ ಅಧಿನಿಯಮದ 4ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ.

13 **ನಾಣ್ಯವು ಯಾವಾಗ ಕಾನೂನು ಸಮ್ಮತ ಚಲಾವಣೆ ಹಣ ಆಗುತ್ತದೆ:—**

(1) 6ನೇ ಪ್ರಕರಣದ ಅಧಿಕಾರದ ಮೇರೆಗೆ ಹೊರಡಿಸಿದ ನಾಣ್ಯಗಳು,—

(ಕ) ಒಂದು ರೂಪಾಯಿಗಿಂತ ಕಡಿಮೆ ಇಲ್ಲದ ಯಾವುದೇ ವರ್ಗದ ನಾಣ್ಯದ ಸಂದರ್ಭದಲ್ಲಿ, ಯಾವುದೇ ಮೊತ್ತಕ್ಕಾಗಿ

(ಖ) ಅರ್ಧ ರೂಪಾಯಿ ನಾಣ್ಯದ ಸಂದರ್ಭದಲ್ಲಿ, ಹತ್ತು ರೂಪಾಯಿಗಳನ್ನು ಮೀರದ ಯಾವುದೇ ಮೊತ್ತಕ್ಕಾಗಿ;

(ಗ) ಯಾವುದೇ ಇತರ ನಾಣ್ಯದ ಸಂದರ್ಭದಲ್ಲಿ ಒಂದು ರೂಪಾಯಿಯನ್ನು ಮೀರದ ಯಾವುದೇ ಮೊತ್ತಕ್ಕಾಗಿ —ಸಂದಾಯದಲ್ಲಿ ಅಥವಾ ಲೆಕ್ಕದ ಬಗ್ಗೆ ಕಾನೂನು ಸಮ್ಮತ ಚಲಾವಣೆ ಹಣವಾಗಿರತಕ್ಕದು:

ಪರಂತು, ನಾಣ್ಯವನ್ನು ವಿರೂಪಗೊಳಿಸಿರಬಾರದು ಮತ್ತು ಅದು, ಅದರ ಸಂದರ್ಭದಲ್ಲಿ ನಿಯಮಿಸಬಹುದಾದಂಥ ತೂಕಕ್ಕಿಂತ ಕಡಿಮೆಯಾಗುವ ಹಾಗೆ ತೂಕವನ್ನು ಕಳೆದುಕೊಂಡಿರಬಾರದು.

(2) ಈ ಅಧಿನಿಯಮದ ಮೇರೆಗೆ 1940ರ 10ನೇ ಮಾರ್ಚಿ ತರುವಾಯ ಮತ್ತು ಭಾರತ ನಾಣ್ಯ ತಯಾರಿಕೆ (ತಿದ್ದುಪಡಿ) ಅಧಿನಿಯಮ, 1947 (1947ರ 28)ರ ಪ್ರಾರಂಭಕ್ಕೆ ಮುಂಚೆ ಹೊರಡಿಸಿದ ಎಲ್ಲಾ ಬೆಳ್ಳಿ ನಾಣ್ಯಗಳು,-

(ಕ) ಒಂದು ರೂಪಾಯಿ ನಾಣ್ಯದ ಸಂದರ್ಭದಲ್ಲಿ, ಯಾವುದೇ ಮೊತ್ತಕ್ಕಾಗಿ;

(ಖ) ಅರ್ಧ ರೂಪಾಯಿಯ ನಾಣ್ಯದ ಸಂದರ್ಭದಲ್ಲಿ ಹತ್ತು ರೂಪಾಯಿಗಳಿಗೆ ಮೀರದ ಯಾವುದೇ ಮೊತ್ತಕ್ಕಾಗಿ;

(ಗ) ಕಾಲು ರೂಪಾಯಿಯ ಸಂದರ್ಭದಲ್ಲಿ, ಒಂದು ರೂಪಾಯಿಗೆ ಮೀರದ ಯಾವುದೇ ಮೊತ್ತಕ್ಕಾಗಿ; —ಸಂದಾಯದಲ್ಲಿ ಅಥವಾ ಲೆಕ್ಕದ ಬಗ್ಗೆ ಕಾನೂನು ಸಮ್ಮತ ಚಲಾವಣೆ ಹಣವಾಗಿರುವುದು ಮುಂಚಿನಂತೆ ಮುಂದುವರಿಯತಕ್ಕದು:

ಪರಂತು, ಆ ನಾಣ್ಯವನ್ನು ವಿರೂಪಗೊಳಿಸಿರಬಾರದು ಮತ್ತು,—

(i) ಒಂದು ರೂಪಾಯಿಯ ನಾಣ್ಯದ ಸಂದರ್ಭದಲ್ಲಿ, 176.4 ಗ್ರೈನ್ಸ್ ಟ್ರಾಯ್, ಅಥವಾ

(ii) ಅರ್ಧರೂಪಾಯಿಯ ನಾಣ್ಯದ ಸಂದರ್ಭದಲ್ಲಿ, 88.2 ಗ್ರೈನ್ಸ್ ಟ್ರಾಯ್, ಅಥವಾ

(iii) ಕಾಲು ರೂಪಾಯಿಯ ನಾಣ್ಯದ ಸಂದರ್ಭದಲ್ಲಿ ನಿಯಮಿಸಬಹುದಾದಂಥ ತೂಕಕ್ಕೆ ಕಡಿಮೆಯಾಗುವಂತೆ —ಅದು ತೂಕವನ್ನು ಕಳೆದುಕೊಂಡಿರಬಾರದು.

(3) 1942ರ ಜನವರಿ 24ನೇ ದಿವಸಕ್ಕೆ ಮುಂಚೆ ಈ ಅಧಿನಿಯಮದ ಮೇರೆಗೆ ಹೊರಡಿಸಿರಬಹುದಾದಂಥ ನಿಕ್ಕಲ್, ತಾಮ್ರ ಮತ್ತು ಕಂಚಿನ ಎಲ್ಲಾ ನಾಣ್ಯಗಳು ಒಂದು ರೂಪಾಯಿಯನ್ನು ಮೀರದ ಯಾವುದೇ ಮೊತ್ತಕ್ಕಾಗಿ ಸಂದಾಯದಲ್ಲಿ ಅಥವಾ ಲೆಕ್ಕದ ಬಗ್ಗೆ ಕಾನೂನು ಸಮ್ಮತ ಚಲಾವಣೆ ಹಣವಾಗಿರುವುದು ಮುಂಚಿನಂತೆಯೇ ಮುಂದುವರಿಯತಕ್ಕದು.

(4) ಭಾರತ ನಾಣ್ಯ ತಯಾರಿಕೆ (ತಿದ್ದುಪಡಿ) ಅಧಿನಿಯಮ, 1964 (1964ರ 17)ದ ಪ್ರಾರಂಭಕ್ಕೆ ಮುಂಚೆ ಈ ಅಧಿನಿಯಮದ ಮೇರೆಗೆ ಹೊರಡಿಸಿರಬಹುದಾದಂಥ, 1956ನೇ ಮೇ 11ನೇ ದಿನಾಂಕದ ಭಾರತ ಸರ್ಕಾರದ ಹಣಕಾಸು ಮಂತ್ರಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯ ಸಂಖ್ಯೆ ಎಸ್.ಆರ್.ಓ.1120ರ ಅಧಿಸೂಚನೆಯ ಮೇರೆಗೆ ಹಾಗೆಂದು ಹೆಸರಿಸಿದ ನಯಾಪೈಸಾ ಸರಣಿಯ ಎಲ್ಲಾ ಹೊಸ ನಾಣ್ಯಗಳು,—

(ಕ) ಅರ್ಧ ರೂಪಾಯಿ ಅಥವಾ ಐವತ್ತು ನಯಾ ಪೈಸೆ ನಾಣ್ಯದ ಸಂದರ್ಭದಲ್ಲಿ, ಹತ್ತು ರೂಪಾಯಿಗಳಿಗೆ ಮೀರದ ಮೊತ್ತಕ್ಕಾಗಿ;

(ಖ) ಯಾವುದೇ ಇತರ ನಾಣ್ಯದ ಸಂದರ್ಭದಲ್ಲಿ, ಒಂದು ರೂಪಾಯಿಗೆ ಮೀರದ ಯಾವುದೇ ಮೊತ್ತಕ್ಕಾಗಿ ಸಂದಾಯದಲ್ಲಿ ಅಥವಾ ಲೆಕ್ಕದ ಬಗ್ಗೆ ಕಾನೂನು ಸಮ್ಮತ ಚಲಾವಣೆ ಹಣವಾಗಿರುವುದು ಮುಂದುವರಿಯತಕ್ಕದು.

14. (1) **ನಾಣ್ಯ ತಯಾರಿಕೆಯ ದಶಮಾಂಶ ಪದ್ಧತಿ:**—ರೂಪಾಯಿಯನ್ನು ನೂರು ಘಟಕಗಳಾಗಿ ವಿಭಜಿಸತಕ್ಕದು ಮತ್ತು ಅಂತಹ ಘಟಕವನ್ನು ಪ್ರತಿನಿಧಿಸುವ ಹೊಸ ನಾಣ್ಯಕ್ಕೆ ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅದು ಸೂಕ್ತವೆಂದು ಯೋಚಿಸುವಂತಹ ಹೆಸರನ್ನು ಕೊಡಬಹುದು ಮತ್ತು ರೂಪಾಯಿ, ಅರ್ಧ ರೂಪಾಯಿ ಮತ್ತು ಕಾಲುರೂಪಾಯಿಯು ಅನುಕ್ರಮವಾಗಿ ಅಂತಹ ಹೊಸ ನಾಣ್ಯಗಳ ಒಂದು ನೂರು, ಐವತ್ತು ಮತ್ತು ಇಪ್ಪತ್ತೈದಕ್ಕೆ ಸಮನಾಗಿರತಕ್ಕದು ಮತ್ತು 13ನೇ ಪ್ರಕರಣದ (1)ನೇ ಉಪಪ್ರಕರಣ ಮತ್ತು (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟಿರತಕ್ಕದು ಮತ್ತು, ಅದರಲ್ಲಿ ನಿರ್ದಿಷ್ಟಪಡಿಸಿರುವಷ್ಟರ ಮಟ್ಟಿಗೆ ಸಂದಾಯದಲ್ಲಿ ಮತ್ತು ಲೆಕ್ಕದ ಬಗ್ಗೆ ತದನುಸಾರವಾಗಿ ಕಾನೂನು ಸಮ್ಮತ ಚಲಾವಣೆ ಹಣವಾಗಿರತಕ್ಕದು.

(2) ಆಣೆಗಳು, ಕಾಲಾಣೆ ಮತ್ತು ಕಾಸುಗಳ ಯಾವುವೇ ವರ್ಗಗಳಲ್ಲಿ ಈ ಅಧಿನಿಯಮದ ಅಧಿಕಾರದ ಮೇರೆಗೆ ಹೊರಡಿಸಿದ ಎಲ್ಲಾ ನಾಣ್ಯಗಳು, 13ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಷ್ಟರ ಮಟ್ಟಿಗೆ (1) ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಒಂದು ನೂರು ಹೊಸ ನಾಣ್ಯಗಳಿಗೆ ಹದಿನಾರಾಣೆ, ಅರವತ್ತು ನಾಲ್ಕು ಕಾಲಾಣೆಗಳು ಅಥವಾ ಒಂದು ನೂರು ತೊಂಬತ್ತೆರಡು ಕಾಸುಗಳ ದರದಲ್ಲಿ, ಸಂದಾಯದಲ್ಲಿ ಮತ್ತು ಲೆಕ್ಕದ ಬಗ್ಗೆ ಒಂದೇ ವ್ಯವಹಾರದಲ್ಲಿ ಕೊಡಮಾಡಿದ ಯಾವುದೇ ಅಂಥ ಒಂದು ನಾಣ್ಯ ಅಥವಾ ಹಲವಾರು ನಾಣ್ಯಗಳಿಗೆ ಸಂಬಂಧಿಸಿದಂತೆ ಅತಿ ಹತ್ತಿರದ ಹೊಸ ನಾಣ್ಯಕ್ಕೆ ಅಥವಾ ಮೇಲಿನ ಹೊಸ ನಾಣ್ಯವು ಹಾಗೂ ಕೆಳಗಿನ ಹೊಸ ನಾಣ್ಯವು ಸಮಾನವಾಗಿ ಹತ್ತಿರವಾಗಿರುವಲ್ಲಿ ಕೆಳಗಿನ ಹೊಸ ನಾಣ್ಯಕ್ಕೆ ಲೆಕ್ಕ ಹಾಕಿದಂತೆ ಕಾನೂನು ಸಮ್ಮತ ಚಲಾವಣೆ ಹಣವಾಗಿರತಕ್ಕುದು.

(3) ಯಾವುದೇ ಅಧಿನಿಯಮಿಂತಿ ಅಥವಾ ಯಾವುದೇ ಅಧಿನಿಯಮಿಂತಿಯ ಮೇರೆಗಿನ ಯಾವುದೇ ಅಧಿಸೂಚನೆ, ನಿಯಮ ಅಥವಾ ಆದೇಶದ ಅಥವಾ ಯಾವುದೇ ಕರಾರು, ಪತ್ರ ಅಥವಾ ಇತರ ಲಿಖಿತದಲ್ಲಿನ ಆಣೆಗಳು, ಕಾಲಾಣೆ, ಕಾಸುಗಳು ವ್ಯಕ್ತಪಡಿಸಿದ ಯಾವುದೇ ಮೌಲ್ಯಕ್ಕೆ ಮಾಡಿದ ಎಲ್ಲಾ ಉಲ್ಲೇಖಗಳನ್ನು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಅದಕ್ಕೆ ಪರಿವರ್ತಿಸಿದಂತೆ (1) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಹೊಸ ನಾಣ್ಯಗಳಲ್ಲಿ ವ್ಯಕ್ತಪಡಿಸಿದ ಮೌಲ್ಯಗಳಿಗೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕುದು.

(4) ಭಾರತ ನಾಣ್ಯ ತಯಾರಿಕೆ(ತಿದ್ದುಪಡಿ) ಅಧಿನಿಯಮ, 1964(1964ರ 17)ರ ಪ್ರಾರಂಭದಿಂದ ನಯಾಪೈಸೆ ಅಥವಾ ನಯಾಪೈಸೆಯಲ್ಲಿನ ಯಾವುದೇ ಮೌಲ್ಯಕ್ಕೆ ಯಾವುದೇ ಅಧಿನಿಯಮಿಂತಿ ಅಥವಾ ಯಾವುದೇ ಅಧಿನಿಯಮಿಂತಿಯ ಮೇರೆಗಿನ ಯಾವುದೇ ಅಧಿಸೂಚನೆ, ನಿಯಮ, ಆದೇಶ ಅಥವಾ ಕರಾರು, ಪತ್ರ ಅಥವಾ ಇತರ ಲಿಖಿತದಲ್ಲಿ ಮಾಡಿದ ಎಲ್ಲಾ ಉಲ್ಲೇಖಗಳನ್ನು, 1964ರ ಜೂನ್ 1ನೇ ದಿವಸದಿಂದ ಹಾಗೆಂದು ಹೆಸರಿಸಿದ ಹೊಸ ನಾಣ್ಯಗಳಾಗಿರುವ ಅನುಕ್ರಮವಾಗಿ ಪೈಸಾ ಅಥವಾ ಪೈಸೆಯಲ್ಲಿ ವ್ಯಕ್ತಪಡಿಸಿದ ಆ ಮೌಲ್ಯಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕುದು.

**15.** [ಹಿಂದಿನ ಅಧಿನಿಯಮಗಳ ಮೇರೆಗೆ ಮಾಡಿದ ನಾಣ್ಯ]:-ಭಾರತ ನಾಣ್ಯ ತಯಾರಿಕೆ (ತಿದ್ದುಪಡಿ) ಅಧಿನಿಯಮ, 1947 (1947ರ 28)ರ 6ನೆಯ ಪ್ರಕರಣದಿಂದ ನಿರಸನಗೊಳಿಸಲಾಗಿದೆ.

**15ಕ. ನಾಣ್ಯವನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳುವ ಅಧಿಕಾರ:**— 13ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅದು ಆ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ದಿನಾಂಕ ಅಥವಾ ವರ್ಗದ್ದಾಗಿರುವ ಯಾವುದೇ ನಾಣ್ಯವನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳಬಹುದು ಮತ್ತು ಹಾಗೆ ನಿರ್ದಿಷ್ಟಪಡಿಸಿದ ದಿನಾಂಕದಂದು ಮತ್ತು ಅಂದಿನಿಂದ ಅಂತಹ ನಾಣ್ಯವು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟರ ಮಟ್ಟಿಗೆ ಹೊರತು ಕಾನೂನು ಸಮ್ಮತ ಚಲಾವಣೆ ಹಣವಾಗಿರುವುದು ನಿಂತುಹೋಗತಕ್ಕುದು.

### ಕಡಿಮೆ ಮಾಡಿದ, ವಿರೂಪಿತ ಮತ್ತು ಖೋಟಾ ನಾಣ್ಯಗಳು

**16. ಕಡಿಮೆ ಮಾಡಿದ ಅಥವಾ ವಿರೂಪಗೊಂಡ ಬೆಳ್ಳಿಯ ನಾಣ್ಯಗಳನ್ನು ಕತ್ತರಿಸಲು ಕೆಲವು ವ್ಯಕ್ತಿಗಳಿಗೆ ಅಧಿಕಾರ:**— ಕೇಂದ್ರ ಸರ್ಕಾರದ ಅಧಿಕಾರದ ಮೇರೆಗೆ ಟಂಕಿಸಿದ ಮತ್ತು ಹೊರಡಿಸಲಾದಂಥ ಯಾವುದೇ ಬೆಳ್ಳಿಯ ನಾಣ್ಯವನ್ನು ಈ ಪ್ರಕರಣದ ಮೇರೆಗೆ ಕಾರ್ಯನಿರ್ವಹಿಸಲು ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಗೆ ಕೊಡ ಮಾಡಿರುವಲ್ಲಿ ಮತ್ತು ಅಂಥ ವ್ಯಕ್ತಿಯು, ಆ ನಾಣ್ಯವು,—

(ಕ) ಯುಕ್ತ ಸವೆತದ ಮಿತಿಯೆಂದು ನಿಯಮಿಸಬಹುದಾದಂಥ ಮಾನಕ ತೂಕಕ್ಕಿಂತ ಕಡಿಮೆ ಶೇಕಡಾವಾರಿಗಿಂತ ಹೆಚ್ಚಾಗಿರುವ ಹಾಗೆ ತೂಕದಲ್ಲಿ ಕಡಿಮೆಯಾಗಿರುವುದೆಂದು; ಅಥವಾ

(ಖ) ವಿರೂಪಗೊಂಡಿರುವುದು ಎಂದು ನಂಬಲು ಕಾರಣವನ್ನು ಹೊಂದಿದ್ದರೆ

—ಅವನು ಸ್ವತಃ ಅಥವಾ ಮತ್ತೊಬ್ಬನ ಮೂಲಕ ನಾಣ್ಯವನ್ನು ಕತ್ತರಿಸತಕ್ಕುದು ಅಥವಾ ಒಡೆಯತಕ್ಕುದು.

**17. 16 (ಕ) ಪ್ರಕರಣದ ಮೇರೆಗೆ ಕತ್ತರಿಸಿದ ನಾಣ್ಯದ ಬಗ್ಗೆ ಪ್ರಕ್ರಿಯೆ:**— 16ನೇ ಪ್ರಕರಣದ (ಕ)ಖಂಡದ ಉಪಬಂಧಗಳ ಮೇರೆಗೆ ನಾಣ್ಯವನ್ನು ಕತ್ತರಿಸುವ ಅಥವಾ ಒಡೆದು ಹಾಕುವ ವ್ಯಕ್ತಿಯು ಈ ಮುಂದಿನ ಪ್ರಕ್ರಿಯೆಯನ್ನು ಅನುಸರಿಸತಕ್ಕುದು, ಎಂದರೆ:—

(ಕ) ಯುಕ್ತ ಸವೆತದ ಮಿತಿಯೆಂದು ನಿಯಮಿಸಬಹುದಾದಂಥ ಮಾನಕ ತೂಕಕ್ಕಿಂತ ಕಡಿಮೆ ಶೇಕಡಾವಾರಿಗಿಂತ ಹೆಚ್ಚಾಗಿರುವ ಹಾಗೆ ಆದರೆ ಈ ಬಗ್ಗೆ ನಿಯಮಿಸಬಹುದಾದಂಥ ಇನ್ನೂ ಹೆಚ್ಚಿನ ಶೇಕಡಾವಾರಿಗಿಂತ ಹೆಚ್ಚಿಲ್ಲದಂತೆ ತೂಕದಲ್ಲಿ ಆ ನಾಣ್ಯವು ಕಡಿಮೆಯಾಗಿದ್ದರೆ, ಅವನು ನಾಣ್ಯವನ್ನು ಕೊಡಮಾಡುವ ವ್ಯಕ್ತಿಗೆ ತುಣುಕುಗಳನ್ನು ಹಿಂದಿರುಗಿಸಬಹುದು ಅಥವಾ ಅಂಥ ವ್ಯಕ್ತಿಯು ಹಾಗೆ ಕೋರಿದರೆ ನಾಣ್ಯವನ್ನು ಸ್ವೀಕರಿಸತಕ್ಕುದು ಮತ್ತು ಅದಕ್ಕಾಗಿ ಈ ಬಗ್ಗೆ ನಿಯಮಿಸಬಹುದಾದಂಥ ದರಗಳಲ್ಲಿ ಸಂದಾಯ ಮಾಡತಕ್ಕುದು; ಮತ್ತು

(ಖ) ಆ ನಾಣ್ಯವು, ಹಿಂದೆ ಹೇಳಿದಂತೆ ಹಾಗೆ ನಿಯಮಿಸಿದಂಥ ಮಾನಕ ತೂಕಕ್ಕಿಂತ ಕಡಿಮೆಯಾದ ಇನ್ನೂ ಹೆಚ್ಚಿನ ಶೇಕಡಾವಾರಿಗಿಂತ ಹೆಚ್ಚಾಗಿರುವ ಹಾಗೆ ತೂಕದಲ್ಲಿ ಕಡಿಮೆಯಾಗಿದ್ದರೆ, ಆ ನಾಣ್ಯವನ್ನು ಕೊಡಮಾಡುವ ವ್ಯಕ್ತಿಗೆ ಆ ತುಣುಕುಗಳನ್ನು ಹಿಂದಿರುಗಿಸತಕ್ಕುದು ಮತ್ತು ಅವನು ಅಂಥ ಕತ್ತರಿಸುವುದು ಅಥವಾ ಒಡೆಯುವುದರಿಂದ ಉಂಟಾಗುವ ನಷ್ಟವನ್ನು ವಹಿಸತಕ್ಕುದು.

**18. 16(ಖ) ಪ್ರಕರಣದ ಮೇರೆಗೆ ಕತ್ತರಿಸಿದ ನಾಣ್ಯದ ಬಗ್ಗೆ ಪ್ರಕ್ರಿಯೆ:**— 16ನೇ ಪ್ರಕರಣದ (ಖ) ಖಂಡದ ಉಪಬಂಧಗಳ ಮೇರೆಗೆ ನಾಣ್ಯವನ್ನು ಕತ್ತರಿಸುವ ಅಥವಾ ಒಡೆಯುವ ವ್ಯಕ್ತಿಯು ಈ ಕೆಳಕಂಡ ಪ್ರಕ್ರಿಯೆಯನ್ನು ಪಾಲಿಸತಕ್ಕುದು, ಎಂದರೆ:—

(ಕ) ಅಂಥ ವ್ಯಕ್ತಿಯು, ನಾಣ್ಯವನ್ನು ಮೋಸದಿಂದ ವಿರೂಪಗೊಳಿಸಲಾಗಿದೆ ಎಂದು ನಂಬಲು ಕಾರಣವಿದ್ದರೆ, ಅವನು ಆ ನಾಣ್ಯವನ್ನು ಕೊಡಮಾಡುವ ವ್ಯಕ್ತಿಗೆ ಅದರ ತುಣುಕುಗಳನ್ನು ಹಿಂದಿರುಗಿಸತಕ್ಕುದು, ಅವನು ಅಂತಹ ಕತ್ತರಿಸುವುದು ಅಥವಾ ಒಡೆಯುವುದರಿಂದ ಉಂಟಾದ ನಷ್ಟವನ್ನು ವಹಿಸತಕ್ಕುದು.

(ಖ) ಆ ನಾಣ್ಯವನ್ನು ಮೋಸದಿಂದ ವಿರೂಪಗೊಳಿಸಲಾಗಿದೆ ಎಂದು ನಂಬಲು ಅಂಥ ವ್ಯಕ್ತಿಗೆ ಕಾರಣವಿಲ್ಲದಿದ್ದರೆ ಅವನು ಆ ನಾಣ್ಯವನ್ನು ಸ್ವೀಕರಿಸತಕ್ಕುದು ಮತ್ತು ಅದಕ್ಕಾಗಿ ಅದರ ನಾಮಮಾತ್ರ ಮೌಲ್ಯವನ್ನು ಸಂದಾಯ ಮಾಡತಕ್ಕುದು.

**ವಿವರಣೆ:**— ಈ ಪ್ರಕರಣದ ಉದ್ದೇಶಗಳಿಗಾಗಿ ಯಾವ ನಾಣ್ಯವು ಸವೆಯಿಸುವುದರಿಂದ ಕಡಿಮೆಯಾಗಿ ವಿರೂಪಗೊಂಡಿದೆ ಎಂದು ನಂಬಲು ಕಾರಣವಿದೆಯೋ ಆ ನಾಣ್ಯವನ್ನು ಮೋಸದಿಂದ ವಿರೂಪಗೊಳಿಸಲಾಗಿದೆ ಎಂದು ಭಾವಿಸತಕ್ಕುದು.

**19. 16ನೇ ಪ್ರಕರಣದ (ಕ) ಖಂಡ ಮತ್ತು (ಖ) ಖಂಡ ಇವೆರಡರ ಮೇರೆಗೆ ಕತ್ತರಿಸಲು ಗುರಿಯಾಗಿರುವಂಥ ನಾಣ್ಯದ ಬಗ್ಗೆ ಪ್ರಕ್ರಿಯೆ:**—

16ನೇ ಪ್ರಕರಣದ (ಕ) ಖಂಡ ಮತ್ತು (ಖ) ಖಂಡ ಇವೆರಡರ ಉಪಬಂಧಗಳ ಮೇರೆಗೆ ಕತ್ತರಿಸುವಿಕೆ ಅಥವಾ ಒಡೆಯುವಿಕೆಗೆ ನಾಣ್ಯವು ಗುರಿಯಾಗಿದ್ದರೆ, ಆ ನಾಣ್ಯವನ್ನು ಕತ್ತರಿಸುವ ಅಥವಾ ಒಡೆಯುವ ವ್ಯಕ್ತಿಯು, ಅದರೊಂದಿಗೆ,—

(ಕ) ಆ ನಾಣ್ಯವನ್ನು ಮೋಸದಿಂದ ವಿರೂಪಗೊಳಿಸಲಾಗಿದೆ ಎಂದು ನಂಬಲು ಅವನಿಗೆ ಕಾರಣವಿದ್ದರೆ, 18ನೇ ಪ್ರಕರಣದ (ಕ) ಖಂಡದ ಮೇರೆಗೆ, ಮತ್ತು

(ಖ) ಇತರ ಸಂದರ್ಭಗಳಲ್ಲಿ 17ನೇ ಪ್ರಕರಣದ ಮೇರೆಗೆ

—ವ್ಯವಹರಿಸತಕ್ಕುದು.

**20. ಖೋಟಾ ಅಥವಾ ಮೋಸದಿಂದ ವಿರೂಪಗೊಳಿಸಲಾದ ನಾಣ್ಯವನ್ನು ಕತ್ತರಿಸಲು ಕೆಲವು ವ್ಯಕ್ತಿಗಳಿಗೆ ಅಧಿಕಾರ ಮತ್ತು ಹಾಗೆ ಕತ್ತರಿಸಲಾದ ನಾಣ್ಯದ ಬಗ್ಗೆ ಪ್ರಕ್ರಿಯೆ:**— ಕೇಂದ್ರ ಸರ್ಕಾರದ ಅಧಿಕಾರದ ಮೇರೆಗೆ ಟಂಕಿಸಲಾಗಿದೆ ಅಥವಾ ಹೊರಡಿಸಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ನಾಣ್ಯವನ್ನು, ಈ ಪ್ರಕರಣದ ಮೇರೆಗೆ ಕಾರ್ಯನಿರ್ವಹಿಸಲು ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಗೆ ಕೊಡಮಾಡಿದಲ್ಲಿ ಮತ್ತು ಅಂಥ ವ್ಯಕ್ತಿಗೆ ಆ ನಾಣ್ಯವು ಖೋಟಾ ಎಂದು ಅಥವಾ ಅದನ್ನು ಮೋಸದಿಂದ ವಿರೂಪಗೊಳಿಸಲಾಗಿದೆ ಎಂದು ನಂಬಲು ಕಾರಣವಿರುವಲ್ಲಿ ಅವನು ಸ್ವತಃ ಅಥವಾ ಇನ್ನೊಬ್ಬನ ಮೂಲಕ ಆ ನಾಣ್ಯವನ್ನು ಕತ್ತರಿಸತಕ್ಕುದು ಅಥವಾ ಒಡೆಯತಕ್ಕುದು ಮತ್ತು ಅವನ ವಿವೇಚನೆಯಲ್ಲಿ ಕೊಡಮಾಡುವವನಿಗೆ ಆ ತುಣುಕುಗಳನ್ನು ಹಿಂದಿರುಗಿಸಬಹುದು, ಅವನು ಅಂಥ ಕತ್ತರಿಸುವಿಕೆ ಅಥವಾ ಒಡೆಯುವಿಕೆಯಿಂದ ಉಂಟಾದ ನಷ್ಟವನ್ನು ವಹಿಸತಕ್ಕುದು ಅಥವಾ ಬೆಳ್ಳಿ ನಾಣ್ಯದ ಸಂದರ್ಭದಲ್ಲಿ, ಆ ನಾಣ್ಯವನ್ನು ಸ್ವೀಕರಿಸಬಹುದು ಮತ್ತು ಆ ನಾಣ್ಯಕ್ಕಾಗಿ ಅದರಲ್ಲಿ ಒಳಗೊಂಡ ಬೆಳ್ಳಿ ಗಟ್ಟಿಯ ಮೌಲ್ಯಕ್ಕೆ ಅನುಸಾರವಾಗಿ ಸಂದಾಯ ಮಾಡಬಹುದು.

## ಪೂರಕ ಉಪಬಂಧಗಳು

**21. ನಿಯಮ ರಚನಾಧಿಕಾರ:**—(1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳು ಮತ್ತು ಗುರಿಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂತಹ ನಿಯಮಗಳು–

* * * *

(ಖ) 16 ಮತ್ತು 20ನೇ ಪ್ರಕರಣಗಳ ಮೇರೆಗೆ ನಾಣ್ಯವನ್ನು ಕತ್ತರಿಸಲು ಅಥವಾ ಒಡೆಯಲು ಅಧಿಕೃತಗೊಳಿಸಿದ ವ್ಯಕ್ತಿಗಳ ಮಾರ್ಗದರ್ಶನಕ್ಕಾಗಿ ಉಪಬಂಧಿಸಬಹುದು;

(ಗ) ಯುಕ್ತ ಸವೆತದ್ದಾಗಿಯೂ ಆಗಿರತಕ್ಕಂಥ ಬೆಳ್ಳಿ ನಾಣ್ಯದ ಸಂದರ್ಭದಲ್ಲಿ ಶೇಕಡಾ ಎರಡಕ್ಕಿಂತ ಅಥವಾ ಪರಿಶುದ್ಧ ನಿಕ್ಕಲ್ ನಾಣ್ಯಗಳ ಸಂದರ್ಭದಲ್ಲಿ ಶೇಕಡಾ ಐದಕ್ಕಿಂತ ಕಡಿಮೆ ಇಲ್ಲದ ಮಾನಕ ತೂಕಕ್ಕಿಂತ ಕಡಿಮೆ ತೂಕದಲ್ಲಿನ ಇಳಿತದ ಶೇಕಡಾವಾರನ್ನು ನಿರ್ಧರಿಸಬಹುದು;

(ಘ) 17ನೇ ಪ್ರಕರಣದ (ಕ) ಖಂಡದಲ್ಲಿ ಉಲ್ಲೇಖಿಸಿರುವ ಹೆಚ್ಚಿನ ಶೇಕಡಾವಾರನ್ನು ಮತ್ತು ಅದೇ ಖಂಡದ ಅಡಿಯಲ್ಲಿ ಬರುವ ನಾಣ್ಯಗಳ ಸಂದರ್ಭದಲ್ಲಿ ಸಂದಾಯ ಮಾಡತಕ್ಕಂಥ ದರಗಳನ್ನು ನಿಯಮಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಅದರ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕುದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

**22. ದಾವೆಗಳ ಪ್ರತಿಷೇಧ:**—ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಅದರ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ವ್ಯವಹರಣೆಯನ್ನು ಹೂಡತಕ್ಕುದಲ್ಲ.

**23. ಟಂಕಸಾಲೆಗಳಲ್ಲಿ ಇತರ ನಾಣ್ಯಗಳನ್ನು ತಯಾರಿಸುವುದನ್ನು ಉಳಿಸುವುದು :**— ಈ ಅಧಿನಿಯಮದಲ್ಲಿರುವುದಾವುದೂ, ಭಾರತ ಪರಿಮಿತಿಗಳ ಆಚೆಗಿನ ಯಾವುದೇ ರಾಜ್ಯಕ್ಷೇತ್ರಗಳ ಸರ್ಕಾರವು ಹಣವೆಂದು ಹೊರಡಿಸುವುದಕ್ಕಾಗಿ ಉದ್ದೇಶಿಸಿದ ನಾಣ್ಯಗಳನ್ನು ಟಂಕಸಾಲೆಯಲ್ಲಿ ತಯಾರಿಸುವುದನ್ನು ನಿಷೇಧಿಸುವುದು ಅಥವಾ ಪರಿಬಂಧಿಸುವುದೆಂದು ಭಾವಿಸತಕ್ಕುದಲ್ಲ.

24. ಹೈದರಾಬಾದಿನ ಕೆಲವು ನಾಣ್ಯಗಳಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಉಪಬಂಧಗಳು:—ಭಾಗ 'ಖ' ರಾಜ್ಯಗಳ (ಕಾನೂನುಗಳ) ಅಧಿನಿಯಮ, 1951ರ (1951ರ 3) 6ನೇ ಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಸದರಿ ಅಧಿನಿಯಮದ ಪ್ರಾರಂಭದಲ್ಲಿದ್ದಂತೆ ಹೈದರಾಬಾದ್ ರಾಜ್ಯದಲ್ಲಿ ಕಾನೂನು ಸಮ್ಮತ ಚಲಾವಣಾ ಹಣವೆಂದು ಚಲಾವಣೆಯಲ್ಲಿದ್ದಂಥ ವಿವರಣೆಯ ನಾಣ್ಯಗಳು ಆ ರಾಜ್ಯದಲ್ಲಿ ಸದರಿ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಇದ್ದಷ್ಟರ ಮಟ್ಟಿಗೆ ಮತ್ತು ಅವೇ ಷರತ್ತುಗಳಿಗೊಳಪಟ್ಟು ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ನಿರ್ಧರಿಸಬಹುದಾದಂಥ ಪ್ರಾರಂಭದಿಂದ ನಾಲ್ಕು ವರ್ಷಗಳಿಗೆ ಮೀರದ ಅವಧಿಯವರೆಗೆ ಕಾನೂನು ಸಮ್ಮತ ಚಲಾವಣೆ ಹಣವಾಗಿರುವುದು ಮುಂದುವರಿಯತಕ್ಕದ್ದು.

ಅನುಸೂಚಿ:— (ನಿರಸನಗೊಳಿಸಿದ ಅಧಿನಿಯಮಗಳು)— ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ, 1914 (1914ರ 10)ರ 3ನೇ ಪ್ರಕರಣ ಮತ್ತು ಅನುಸೂಚಿ IIರ ಮೂಲಕ ನಿರಸನಗೊಳಿಸಲಾಗಿದೆ.

---

ಮೇಲ್ಕಂಡ ನಾಣ್ಯ ತಯಾರಿಕೆ ಅಧಿನಿಯಮ, 1906 (1906ರ 3)ರ ಕನ್ನಡ ಭಾಷಾಂತರವನ್ನು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳ) ಅಧಿನಿಯಮ, 1973ರ 2ನೇ ಪ್ರಕರಣದ (ಕ) ಖಂಡದ ಮೇರೆಗೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲು ರಾಷ್ಟ್ರಪತಿಯವರು ಅಧಿಕೃತಗೊಳಿಸಿದ್ದಾರೆ.

ನವದೆಹಲಿ
ದಿನಾಂಕ :

ಕಾರ್ಯದರ್ಶಿ,
ಭಾರತ ಸರ್ಕಾರ.

The above translation in Kannada of the Coinage Act, 1906 (3 of 1906) has been authorised by the President to be published in the official Gazette under clause (a) of section 2 of the Authoritative Texts (Central Laws) Act, 1973.

New Delhi
Date :

V. S. RAMADEVI
Secretary to the Govt. of India